**ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ವಾರ್ಷಿಕ ಸಾಮಾನ್ಯ ಸಭೆ, ನೆಫ್ರೋ–ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 24.01.2022 ರಂದು ಅಪರಾಹ್ನ 12.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಗೃಹ ಕಛೇರಿ "ಕೃಷ್ಣಾ" ಇಲ್ಲಿ ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯ ಸಭಾ ನಡವಳಿಗಳು :**

**ಸಭೆಯಲ್ಲಿ ಹಾಜರಿದ್ದ ಸದಸ್ಯರು :**

1. ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ — ಅಧ್ಯಕ್ಷರು
   ಮಾನ್ಯ ಮುಖ್ಯಮಂತ್ರಿಗಳು,
   ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,
   ಆಡಳಿತ ಮಂಡಳಿ, ನೆಫ್ರೋ–ಯುರಾಲಜಿ ಸಂಸ್ಥೆ,
   ಬೆಂಗಳೂರು.

2. ಸನ್ಮಾನ್ಯ ಡಾ॥ ಕೆ. ಸುಧಾಕರ್, — ಉಪಾಧ್ಯಕ್ಷರು
   ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು
   ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು,
   ಆಡಳಿತ ಮಂಡಳಿ, ನೆಫ್ರೋ–ಯುರಾಲಜಿ ಸಂಸ್ಥೆ,
   ಬೆಂಗಳೂರು.

3. ಶ್ರೀ. ನವೀನ್ ರಾಜ್ ಸಿಂಗ್, — ಸದಸ್ಯರು
   ಭಾ.ಆ.ಸೇ.
   ಸರ್ಕಾರದ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
   (ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ,
   ಬೆಂಗಳೂರು.

4. ಶ್ರೀ. ಡಿ. ರಂದೀಪ್, — ಸದಸ್ಯರು
   ಭಾ.ಆ.ಸೇ.,
   ಆಯುಕ್ತರು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
   ಆರೋಗ್ಯ ಸೌಧ, ಬೆಂಗಳೂರು.

5. ಡಾ॥ ಪಿ.ಜಿ. ಗಿರೀಶ್,
   ನಿರ್ದೇಶಕರು — ಸದಸ್ಯರು
   ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
   ಆನಂದರಾವ್ ವೃತ್ತ,
   ಬೆಂಗಳೂರು.

6. ಡಾ॥ ಇಂದುಮತಿ,
   ನಿರ್ದೇಶಕರು, — ಸದಸ್ಯರು
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
   ಆನಂದರಾವ್ ವೃತ್ತ, ಬೆಂಗಳೂರು.

7. ಡಾ॥ ಜಿ.ಕೆ. ವೆಂಕಟೇಶ್, — ಅಧಿಕಾರೇತರ ಸದಸ್ಯರು
   ಯುರಾಲಜಿಸ್ಟ್ ಹಾಗೂ ನಿರ್ದೇಶಕರು (ನಿವೃತ್ತ),
   ನೆಫ್ರೋ–ಯುರಾಲಜಿ ಸಂಸ್ಥೆ
   ಬೆಂಗಳೂರು.

8. ಡಾ॥ ಕೇಶವಮೂರ್ತಿ.ಆರ್., — ಸದಸ್ಯ ಕಾರ್ಯದರ್ಶಿಗಳು
   ನಿರ್ದೇಶಕರು,
   ನೆಫ್ರೋ–ಯುರಾಲಜಿ ಸಂಸ್ಥೆ,
   ಬೆಂಗಳೂರು.

---

ನೆಫ್ರೋ–ಯುರಾಲಜಿ ಸಂಸ್ಥೆಯ ನಿರ್ದೇಶಕರು ಹಾಗೂ ವಾರ್ಷಿಕ ಸಾಮಾನ್ಯ ಸಭೆಯ ಸದಸ್ಯ ಕಾರ್ಯದರ್ಶಿಗಳಾದ ಡಾ॥ ಕೇಶವಮೂರ್ತಿ.ಆರ್. ಇವರು ಸಭೆಯಲ್ಲಿ ಹಾಜರಿದ್ದ ನೆಫ್ರೋ–ಯುರಾಲಜಿ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಡಾ॥ ಕೆ. ಸುಧಾಕರ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ವಾರ್ಷಿಕ ಸಾಮಾನ್ಯ ಸಭೆ, ನೆಫ್ರೋ–ಯುರಾಲಜಿ ಸಂಸ್ಥೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಯ ಇತರೆ ಎಲ್ಲಾ ಸದಸ್ಯರುಗಳನ್ನು ಗೌರವಪೂರ್ವಕವಾಗಿ ಸಭೆಗೆ ಆಹ್ವಾನಿಸಿ, ಸನ್ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯನ್ನು ಜರುಗಿಸಿಕೊಡುವಂತೆ ಕೋರಿದರು.

ಸಂಸ್ಥೆಯ ಕಾರ್ಯವೈಖರಿಯ ಹಾಗೂ ವಾರ್ಷಿಕ ವರದಿಯ ಬಗ್ಗೆ ಸವಿವರವಾಗಿ ವಿವರಿಸಿದರು. ದಿನಾಂಕ : 26.12.2019 ರಂದು ಜರುಗಿದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಗಳನ್ನು ಸ್ಥಿರೀಕರಿಸಲು ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆ ಕೋರಿದರು.

ಸದರಿ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ (2) : ನೆಫ್ರೋ–ಯುರಾಲಜಿ ಸಂಸ್ಥೆಯ 2018–19, 2019–20 ಮತ್ತು 2020–21 ನೇ ಸಾಲಿನ ಕರಡು ವಾರ್ಷಿಕ ವರದಿಯನ್ನು ಅನುಮೋದಿಸುವ ಬಗ್ಗೆ.**

ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ಇವರು 2018–19, 2019–20 ಮತ್ತು 2020–21ನೇ ಸಾಲಿನ ಕಾರ್ಯಚಟುವಟಿಕೆಗಳು ಹಾಗೂ ನೂತನ ಕಾರ್ಯಕ್ರಮಗಳ ಜಾರಿ ಹಾಗೂ ಒಟ್ಟಾರೆ ಪ್ರಗತಿಯ ಬಗ್ಗೆ ತಯಾರಿಸಿ ಮಂಡಿಸಲಾಗಿರುವ ಕರಡು ವಾರ್ಷಿಕ ವರದಿಗಳನ್ನು ವಿವರಿಸಿ ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆ ಕೋರಿದರು.

ಸಾಮಾನ್ಯ ಸಭೆಯು ನೆಫ್ರೋ–ಯುರಾಲಜಿ ಸಂಸ್ಥೆಯ 2018–19, 2019–20 ಮತ್ತು 2020–21ನೇ ಸಾಲಿನ ಕರಡು ವಾರ್ಷಿಕ ವರದಿಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷ ಪೀಠಕ್ಕೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಬಸವರಾಜ ಎಸ್ ಬೊಮ್ಮಾಯಿ)
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು, ವಾರ್ಷಿಕ ಸಾಮಾನ್ಯ ಸಭೆ,
ನೆಫ್ರೋ–ಯುರಾಲಜಿ ಸಂಸ್ಥೆ,
ಬೆಂಗಳೂರು.